ಕರ್ನಾಟಕ ವಿಧಾನ ಸಭೆ

ಬುಧವಾರ. 18ನೇ ಜುಲೈ 1990 ಆಷಾಡ 27, 1912
ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ
ಸಭಾಂಗಣದಲ್ಲಿ ಬೆಲಿಗ್ಗೆ 9.50 ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು: (ಶ್ರೀ. ಎಸ್.ಎಂ.ಕೃಷ್ಣ.) ಪೀಠವನ್ನು ಅಲಂಕರಿಸಿದ್ದರು.]

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ರಾಜ್ಯದಲ್ಲಿ ಐ.ಎಂ.ಎಫ್.ಎಲ್ ಮೇಲೆ ಹೆಚ್ಚಿಸಿರುವ ಡ್ಯೂಟಿ ಫೀನಿಂದ ರಾಜ್ಯದ ಬೊಕ್ಕಸಕ್ಕೆ ಆದ ಹಾನಿ ಬಗ್ಗೆ.

1470 ಶ್ರೀ ಪಿ.ಜಿ.ಆರ್ .ಸಿಂಧ್ಯ (ಕನಕಪುರ):- ಮಾನ್ಯ ಆರ್ಥಿಕ ಮತ್ತು ಆಬಕಾರಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಐ.ಎಂ.ಎಫ್.ಎಲ್ ಮೇಲೆ ಹೆಚ್ಚಿಸಿರುವ ಡ್ಯೂಟಿ ಫೀನಿಂದ ರಾಜ್ಯದ ಬೊಕ್ಕಸಕ್ಕೆ ಹಾನಿ ಆಗಿಲ್ಲವೆ?

ಆ) ಹಾಗಿದ್ದಲ್ಲಿ, ಸರ್ಕಾರವು ಇದನ್ನು ಸರಿಪಡಿಸಲು ಕ್ರಮ ಕೈಗೊಳ್ಳುವುದೇ?

ಶ್ರೀ ಎಂ.ರಾಜಶೇಖರಮೂರ್ತಿ (ಆರ್ಥಿಕ ಮತ್ತು ಆಬಕಾರಿ ಸಚಿವರು)

ಅ) ಇಲ್ಲ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಈ ಪ್ರಶ್ನೆಗೆ ಉತ್ತರ ಬೇಡಿಕೆಗಳ ಚರ್ಚೆಗೆ ಹಿಂದೆಯೇ ಬಂದಿದ್ದರೆ ಅರ್ಥ ಇರುತ್ತಿತ್ತು. ಮಾನ್ಯ ಮಂತ್ರಿಗಳು ಈ ಮೊದಲು ಉತ್ತರವನ್ನು ಕೊಟ್ಟಿದ್ದಾರೆ. ಅದೇ ಉತ್ತರ ಈಗಲೂ ನಿಲ್ಲುತ್ತದೆಂದು ನಾನು ಅಂದುಕೊಂಡಿದ್ದೇನೆ.

ಶ್ರೀ ಎಂ. ರಾಜಶೇಖರ ಮೂರ್ತಿ:- ಹೌದು, ಅದೇ ಉತ್ತರ ನಿಲ್ಲುತ್ತದೆ.

(ಶ್ರೀಯುತರುಗಳಾದ ಪೆರಿಕಲ್ ಮಲ್ಲಪ್ಪ, ನಾರಾಯಣಸ್ವಾಮಿ, ರೇವಣ್ಣ, ಲಕ್ಕಪ್ಪ, ಇವರು ಹಾಜರಿಲ್ಲ)

ಅಧ್ಯಕ್ಷರು:- ಷಪಿ ಅಹಮ್ಮದ್ ಅವರ 562ನೇ ಪ್ರಶ್ನೆಯನ್ನು ಶ್ರೀ ಶಿವನಂಜಪ್ಪನವರು ಕೇಳಬಹುದು.

ಶ್ರೀ ಎಸ್.ಎಂ. ಯಾಹ್ಯಾ:- ಈಗ ಮಂತ್ರಿಗಳು ಇಲ್ಲ, ಇದಕ್ಕೆ ಸ್ವಲ್ಪ ಸಮಯ ಬೇಕಾಗುತ್ತದೆ.

ಶ್ರೀ ಜಿ. ಶಿವನಂಜಪ್ಪ:- ಉತ್ತರವನ್ನು ಕಳುಹಿಸಿದ್ದಾರೆ.

ಅಧ್ಯಕ್ಷರು:- ಪುನಃ ನಾನು ತಮ್ಮನ್ನು ಕರೆಯುತ್ತೇನೆ.

ಶ್ರೀ ಸೋಮಸುಂದರಂ, ಶ್ರೀ ಸಾದರ್ತ ಅಲಿಖಾನ್ ಮತ್ತು ಶ್ರೀ ಎಂ.ಮಲ್ಲಿಕಾರ್ಜುನ ಅವರು ಸಭೆಯಲ್ಲಿ ಹಾಜರಿಲ್ಲ. ಶ್ರೀ ಹನುಮೇಗೌಡರ ಪ್ರಶ್ನೆಗೆ ಉತ್ತರ ಕೊಡಲು ಮಾನ್ಯ ಮಂತ್ರಿಗಳು ಸಮಯಬೇಕೆಂದು ಕೇಳಿದ್ದಾರೆ. ಈಗ ಶ್ರೀ ಶಿವರಾಮು ಅವರು 1680ನೇ ಪ್ರಶ್ನೆ ಕೇಳಬಹುದು.